ಪ್ರಾಣ ಕಳೆದುಕೊಳ್ಳುವುದು ಸುಲಭವೂ–ಸಹಜವೂ ಅಲ್ಲ. ಅಖ್ತರನಿಗೆ ನೆನಪಿದ್ದಂತೆ ಛಾವಣಿಯ ಸುತ್ತಲೂ ಮೂರೂವರೆಯಡಿಯಷ್ಟು ಎತ್ತರದ ಗೋಡೆಯನ್ನು ಕಟ್ಟಿದ್ದರು... ಐದೂವರೆ ಅಡಿಯಷ್ಟು ಎತ್ತರವಿದ್ದ ಅಖ್ತರ, ಆ ದಿನ ಧೈರ್ಯವಾಗಿ ಗೋಡೆಗೆ ಒರಗಿ ನಿಂತಿದ್ದನ್ನು – ಮುಕುಂದ ಸಾಗರ ಅಲ್ಲೇ ನಿಂತು ಸಿಗರೇಟ್ ಸೇದಿದ್ದನ್ನು ನೆನಪು ಮಾಡಿಕೊಂಡ. ಆದರೆ ಮುಕುಂದ ಸಾಗರ ಅಲ್ಲಿಂದ ಹೇಗೆ ಬಿದ್ದ ಎನ್ನುವ ವಿಚಾರದ ಬಗ್ಗೆ ಸುದ್ದಿ ಮಾಧ್ಯಮಗಳು ಎತ್ತಿದ್ದ ಪ್ರಶ್ನೆಗಳಲ್ಲಿದ್ದ ಒಂದು ಸಹಜ ಕುತೂಹಲ ಸರಿಯಾದದ್ದೇ ಎಂದು ಅಖ್ತರಿನಿಗನ್ನಿಸಿದರೂ – ಆ ಪ್ರಶ್ನೆಗಳನ್ನು ಕೇಳಿದ ರೀತಿ ಮತ್ತು ಅದಕ್ಕೆ ಒದಗಿಸಿದ್ದ ಸಂದರ್ಭದ ಸಮರ್ಪಕತೆಯನ್ನು ಕಂಡಾಗ ಅದು ಸರಿಯಾದದ್ದಲ್ಲ ಅನ್ನಿಸಿತ್ತು. ಆದರೆ ಅದು ಹಾಗಿದ್ದರೂ ಮುಕುಂದಸಾಗರನ ದುರಂತ ಸಾವು ಮತ್ತು ಸುಜಾತಾಳ ಜೀವನದಲ್ಲಿ ಉಂಟಾಗಿದ್ದ ತೂಫಾನು ಈ ವಿಷಯಗಳು ಅವನಿಗೆ ಯಾಕೆ ಗೊತ್ತಾಗಲಿಲ್ಲ ಎನ್ನುವುದೇ ತೀವ್ರ ಚಿಂತೆಯನ್ನುಂಟುಮಾಡಿತ್ತು.

ಅಖ್ತರ ಈಗ ಈ ಮನೋಧರ್ಮಕ್ಕೆ ಬರುವುದಕ್ಕೂ – ಧಾರ್ಮಿಕತೆಯತ್ತ – ಆಧ್ಯಾತ್ಮಿಕತೆಯತ್ತ ಪಲ್ಲಟಗೊಳ್ಳುವುದಕ್ಕೆ ಇದೇ ರೀತಿಯ ಸಂದರ್ಭವು ಕಾರಣವಾಗಿತ್ತು. ಅಖ್ತರ್ ಚಿಕ್ಕಂದಿನಲ್ಲಿ ನೋಡಿ ಮೆಚ್ಚಿದ್ದ ನಗ್ಮಾಳನ್ನು ನಿಖಾ ಮಾಡಿಕೊಂಡಿದ್ದನಾದರೂ ಆಕೆಯನ್ನು ಅವನು ಉಳಿಸಿಕೊಳ್ಳಲಾಗಿರಲಿಲ್ಲ. ಅವರ ಮೊದಲ ಮಗುವಿನ ಹೆರಿಗೆಯ ವೇಳೆಯಲ್ಲಿ ಅವಳು ಇದ್ದಕ್ಕಿದ್ದ ಹಾಗೆ – ಯಾವುದೇ ಸೂಚನೆಯಿಲ್ಲದೇ ಅಸುನೀಗಿದ್ದಳು. ತನ್ನ ಪತ್ನಿಯ ಸಾವಿಗೆ ಯಾವ ರೀತಿಯ ತರ್ಕವೂ ಅವನಿಗೆ ಸಿಕ್ಕಿರಲಿಲ್ಲವಾದ್ದರಿಂದ ಇದರಲ್ಲಿ ಅಲ್ಲಾಹುವಿನ ಯಾವುದೋ ಸಂದೇಶವಿರಬಹುದು ಎಂದು ಅವನು ಭಾವಿಸಿದ್ದ. ಅಲ್ಲಾಹುವಿನ ಜೊತೆ ತರ್ಕಕಿಳಿಯುವುದಕ್ಕಿಂತ ಅವನತ್ತ ಸಂಪೂರ್ಣ

